ಫೆಬ್ರವರಿ 24, 2004

## ಚಾಲ್ತಿ ಖಾತೆ ವ್ಯವಹಾರಗಳ ಮತ್ತಷ್ಟು ಉದಾರೀಕರಣ

ಚಾಲ್ತಿ ಖಾತೆ ವ್ಯವಹಾರಗಳನ್ನು ಮತ್ತಷ್ಟು ಸರಳೀಕರಣಗೊಳಿಸುವ ಮತ್ತು ಉದಾರೀಕರಣಗೊಳಿಸುವ ಸಲುವಾಗಿ, ಭಾರತೀಯ ರಿಸರ್ವ್ ಬ್ಯಾಂಕು, ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000ರ ನಿಬಂಧನೆಗಳಿಗನುಸಾರವಾಗಿ, ಈ ಕೆಳಕಂಡ ಹಣದ ರವಾನೆಗಳ ಪ್ರವರ್ಗಗಳನ್ನು ಅಧಿಕೃತ ವ್ಯಾಪಾರಿಗಳಿಗೆ ಮುಕ್ತವಾಗಿ ಅವಕಾಶ ನೀಡಲು ಅದರ ನಿರ್ಣಯವನ್ನು ಪ್ರಕಟಿಸಿದೆ.

- ಕಲಾವಿದರಿಂದ ಹಣದ ರವಾನೆ ಉದಾಹರಣೆಗೆ, ಕುಸ್ತಿಪಟುಗಳು, ನರ್ತಕಿಯರುಗಳು, ಮನೋರಂಜನೆಕಾರರು, ಇತ್ಯಾದಿ
- ನಿವಾಸದ ನಿವೇಶನಗಳ ಮಾರಾಟಕ್ಕಾಗಿ 25,000 ಅಮೇರಿಕನ್ ಡಾಲರುಗಳು ಅಥವಾ ಹಣದ ಒಳರವಾನೆ ಶೇಕಡ 5ರಷ್ಟು ಯಾವುದು ಹೆಚ್ಚೋ ಅದನ್ನು ವಿದೇಶದ ಏಜೆಂಟರುಗಳಿಗೆ ಕಮೀಷನ್ ನೀಡಬಹುದು.
- ಭಾರತೀಯ ಕಂಪನಿಗಳ ಸಾಗರೋತ್ತರ ಕಚೇರಿಗಳಿಗೆ ಅಲ್ಪಾವಧಿ ಸಾಲ
- ರಫ್ತು ಗಳಿಕೆಗಳು 10 ಲಕ್ಷ ರೂ.ಗಳಿಗಿಂತ ಕಡಿಮೆಯಿರುವಲ್ಲಿ ವಿದೇಶಿ ದೂರದರ್ಶನದ ಜಾಹಿರಾತಿಗೆ ಹಣದ ರವಾನೆ
- ಒಪ್ಪಂದಗಳನ್ನು ರಿಸರ್ವ್ ಬ್ಯಾಂಕಿನೊಂದಿಗೆ ನೋಂದಾಯಿಸಿಲ್ಲದಿರುವಲ್ಲಿ, ಗೌರವಧನದ ಹಣದ ರವಾನೆ ಮತ್ತು ಒಂದೇ ಮೊತ್ತದ ಶುಲ್ಕಗಳ ಸಂದಾಯ. ಆದರೆ, ಆ ಸಂದಾಯಗಳು, ಫೆಮಾ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು 2000 ದ 2ನೇ ಅನುಸೂಚಿಯಡಿ ನಿಯಮಿಸಲಾದ ಗುಣಮಟ್ಟಗಳೊಂದಿಗೆ ಸರಿ ಹೊಂದಿರಬೇಕು.
- ವ್ಯಾಪಾರ ಚಿಹ್ನೆ/ವಿಶೇಷ ಹಕ್ಕು ಉಪಯೋಗಿಸಲು ಹಣದ ರವಾನೆಗಳಿಗೆ, ವ್ಯಾಪಾರ ಚಿಹ್ನೆ/ವಿಶೇಷ ಹಕ್ಕುಗಳನ್ನು ಖರೀದಿಸಲು, ರಿಸರ್ವ್ ಬ್ಯಾಂಕ್‌ನ ಪೂರ್ವಾನುಮೋದನೆಯ ಅಗತ್ಯತೆಯು ಮುಂದುವರಿಯುತ್ತದೆ.

ಈ ವ್ಯವಹಾರಗಳಿಗೆ, ಮುಂಚೆ ರಿಸರ್ವ್ ಬ್ಯಾಂಕಿನ ಪೂರ್ವಾನುಮೋದನೆ ಅಗತ್ಯ ಇತ್ತು ಮತ್ತು ಅದೇ ರೀತಿಯಲ್ಲಿ, ವಿದೇಶದ ಕಂಪನಿಯಿಂದ, ವೈಯಕ್ತಿಕ ಆರೋಗ್ಯ ವಿಮೆಯನ್ನು ಪಡೆಯಲು ಹಣದ ರವಾನೆಗಳಿಗೆ ಇನ್ನು ಮುಂದೆ ಭಾರತ ಸರ್ಕಾರದ ಪೂರ್ವಾನುಮೋದನೆಯ ಅಗತ್ಯಯಿಲ್ಲ.

ನಿರ್ವಹಣಾ ಮಾರ್ಗದರ್ಶನ ಸೂತ್ರಗಳನ್ನು ಅಧಿಕೃತ ವ್ಯಾಪಾರಿಗಳಿಗೆ ನೀಡಲಾಗಿದೆ.

ಪಿ.ವಿ. ಸದಾನಂದನ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/1019